**ಮೂರನೇ ಹೆಚ್ಚುವರಿ ದಿವಾನಿ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಕಡೂರು.**

**ಸಿ.ಸಿ. ನಂ.3744/2023**

ಪಿರ್ಯಾದಿ : **ಕರ್ನಾಟಕ ರಾಜ್ಯ,**
ಪ್ರತಿನಿಧಿಸುವವರು ಬೀರೂರು ಪೊಲೀಸ್.

ವಿರುದ್ಧ

ಆರೋಪಿಗಳು : ಶ್ರೀ ಪುಂಡಲೀಕ ಮತ್ತು ಇತರರು.

**<u>ದೋಷಾರೋಪಣೆ</u>**

ಶ್ರೀ. ತಾಹಾಕಲೀಲ್. ಕೆ.ಎ. ಬಿ.ಎ. ಎಲ್.ಎಲ್. ಬಿ., ಮೂರನೇ ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಕಡೂರು ಆದ ನಾನು ಆರೋಪಿಗಳಾದ:

1. ಪುಂಡಲೀಕ ಎ.ಜಿ. ಬಿನ್. ಗಂಗಪ್ಪ,
   ಪ್ರಾಯ 51 ವರ್ಷ,

2. ಮಂಜುನಾಥ @ ಮಂಜಪ್ಪ ಬಿನ್ ನಾಗಪ್ಪ
   ಪ್ರಾಯ 34 ವರ್ಷ,

3. ಚಿನ್ನಪ್ಪ @ ಚಿನ್ನಸ್ವಾಮಿ ಬಿನ್ ಲಕ್ಕ್ಮಪ್ಪ ,
   ಪ್ರಾಯ 52 ವರ್ಷ,

4. ಕುಮಾರ ಬಿನ್ ಗಂಗಪ್ಪ
   ಪ್ರಾಯ 40 ವರ್ಷ

ಎಲ್ಲರೂ ವಾಸ ಹಿರೇನಲ್ಲೂರು ಕಾವಲು, ಕಡೂರು ತಾಲೂಕು.

**ಮೊದಲನೆಯದಾಗಿ** ದಿನಾಂಕ 30.08.2023 ರಂದು ಸಂಜೆ ಗಂಟೆ 5:45 ಗಂಟೆಯ ಸಮಯದಲ್ಲಿ ಬೀರೂರು ಠಾಣಾ ಸರಹದ್ದಿನ ಹಿರೇನಲ್ಲೂರು ಕಾವಲು ಗ್ರಾಮದ 1ನೇ ಆರೋಪಿಯ ಮನೆಯ ಮುಂಭಾಗದ ರಸ್ತೆಯಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಸಾಕ್ಷಿ -1 ರವರಿಗೆ ಅವಮಾನ ಮಾಡಿದರೆ ಅವರು ಸಮಾಜದ ಶಾಂತಿಯನ್ನು ಕದಡಬಹುದು ಎಂದು ತಿಳಿದಿದ್ದರೂ ಸಹ ಉದ್ದೇಶಪೂರ್ವಕವಾಗಿ ನೀವು ಸಾಕ್ಷಿ-1 ರವರಿಗೆ ಸೂಳೆಮಗನೇ, ಬೋಳಿಮಗನೇ ಎಂದು ಅವಾಚ್ಯ ಶಬ್ಧಗಳಿಂದ ನಿಂದಿಸಿ ಅವಮಾನ ಮಾಡಿರುತ್ತೀರ. ಆ ಮೂಲಕ ನೀವುಗಳು ಭಾರತೀಯ ದಂಡ ಸಂಹಿತೆಯ ಕಲಂ 504 ರ ಸಹವಾಚಕ ಕಲಂ 34 ರಡಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಎಸಗಿರುತ್ತೀರಿ.

**ಎರಡನೆಯದಾಗಿ:** ಮೇಲೆ ಹೇಳಿದ ಸಮಯ, ದಿನಾಂಕ ಮತ್ತು ಸಂಧರ್ಭಗಳಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಜೊತೆಸೇರಿ ನಿಮ್ಮ ಪೈಕಿ 2ನೇ ಆರೋಪಿಯು ಚಾ.ಸಾ.2 ಚನ್ನಪ್ಪರವರಿಗೆ ಆಯುಧವಾಗಿ ಬಳಸಿದರೆ ದೊಣ್ಣೆಯಿಂದ ಎಡಕಾಲಿಗೆ  ಹೊಡೆದು ಸ್ವ ಇಚ್ಛೆಯಿಂದ ಗಾಯವನ್ನು ಮಾಡಿರುತ್ತಾರೆ.  ಆ ಮೂಲಕ ಆರೋಪಿಗಳಾದ ನೀವು ಸಹ ಭಾರತೀಯ ದಂಡ ಸಂಹಿತೆಯ ಕಲಂ 324 ಸಹವಾಚಕ ಕಲಂ 34 ರಡಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಎಸಗಿರುತ್ತೀರಿ.

**ಮೂರನೆಯದಾಗಿಃ** ಮೇಲೆ ಹೇಳಿದ ಸಮಯ, ದಿನಾಂಕ ಮತ್ತು ಸಂಧರ್ಭಗಳಲ್ಲಿ ನೀವು  ಸಮಾನ ಉದ್ದೇಶದಿಂದ ಜೊತೆಸೇರಿ ನಿಮ್ಮ ಪೈಕಿ 1, 2 ಮತ್ತು 3ನೇ ಆರೋಪಿಗಳು  ಚಾ.ಸಾ.1 ರವರಿಗೆ ಕೈಯಿಂದ ಹೊಡೆದು ನೋವನ್ನು ಉಂಟು ಮಾಡಿರುತ್ತೀರಿ. ಆ ಮೂಲಕ  ಆರೋಪಿಗಳಾದ ನೀವು ಸಹ ಭಾರತೀಯ ದಂಡ ಸಂಹಿತೆಯ ಕಲಂ 323 ಸಹವಾಚಕ ಕಲಂ 34 ರಡಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಎಸಗಿರುತ್ತೀರಿ.

**ಕೊನೆಯದಾಗಿಃ** ಮೇಲೆ ಹೇಳಿದ ಸಮಯ, ದಿನಾಂಕ ಮತ್ತು ಸಂಧರ್ಭಗಳಲ್ಲಿ ನೀವು  ಸಮಾನ ಉದ್ದೇಶದಿಂದ ಜೊತೆಸೇರಿ ನಿಮ್ಮ ಪೈಕಿ 2, 3 ಮತ್ತು 4ನೇ ಆರೋಪಿಗಳು  ಚಾ.ಸಾ.1 ರವರಿಗೆ ನಿಮ್ಮನ್ನು ಇಷ್ಟಕ್ಕೆ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿ  ಅಪರಾಧಿಕ ಭಯೋತ್ಪಾದನೆಯನ್ನು ನಿಮ್ಮ ಸಮಕ್ಷಮದಲ್ಲಿ ಮಾಡಿರುತ್ತಾರೆ.  ಆ ಮೂಲಕ  ಆರೋಪಿಗಳಾದ ನೀವು ಸಹ ಭಾರತೀಯ ದಂಡ ಸಂಹಿತೆಯ ಕಲಂ 506 ಸಹವಾಚಕ ಕಲಂ 34 ರಡಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಮೇಲೆ ಹೇಳಿರುವ ದೋಷಾರೋಪಣೆಗಳಿಗೆ ಈ ನ್ಯಾಯಾಲಯದಲ್ಲಿ ವಿಚಾರಣೆಗೊಳಪಡಬೇಕಾಗಿ ಈ ಮೂಲಕ ನಿರ್ದೇಶಿಸುತ್ತೇನೆ.

sd/-

**(ತಾಹಾಕಲೀಲ್. ಕೆ.ಎ)**

ದಿನಾಂಕ: 12.06.2024

3 ನೇ ಹೆಚ್ಚುವರಿ ಸಿವಿಲ್ ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ
ಕಡೂರು.